**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>**

**C.C. - 1634-22** **ಪಿಡಬ್ಲ್ಯೂ ಃ** **<u>13</u>**

**ಸಿಡಬ್ಲ್ಯೂ ಃ** **<u>28</u>**

ಸಾಕ್ಷಿದಾರರ ಹೆಸರು ಃ ನಾಗಯ್ಯ ಕಾಡದೇವ

ತಂದೆ ಹೆಸರು ಃ ಚಂದ್ರಶೇಖರ

ವಯಸ್ಸು ಃ 43 ವರ್ಷ

ಉದ್ಯೋಗ ಃ ಪಿ ಐ ರಾಣೇಬೆನ್ನೂರ ಗ್ರಾಮೀಣ

ವಾಸಸ್ಥಳ ಃ ರಾಣೇಬೆನ್ನೂರ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 30.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಡಿಸೆಂಬರ 2020 ರಿಂದ ಆಗಸ್ಟ 2023 ವರೆಗೆ ಪೂರ್ವ ಸಂಚಾರಿ ಪೋಲಿಸ ಠಾಣೆಯಲ್ಲಿ ಇನ್ಸಪೆಕ್ಟರ ಅಂತಾ ಸೇವೆ ಸಲ್ಲಿಸಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿಃ 22.02.2022 ರಂದು ಸಂಜೆಃ 8 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕಾರ ಮಾಡಿ, ಠಾಣಾ ಗುನ್ನಾ ನಂಃ 9/2022 ರಲ್ಲಿ ಪ್ರಕರಣ ದಾಖಲ್ ಮಾಡಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಅದರ ಪ್ರತಿಯನ್ನು ಮೇಲಾಧಿಕಾರಿಗಳಿಗೆ ಕಳಿಸಿಕೊಟ್ಟಿದ್ದೇನೆ. ಸಾಕ್ಷಿಯೂ ದೂರನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ.1-ಬಿ ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.27 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿಪಿ.27-ಎ ಎಂದು ಗುರುತಿಸಲಾಯಿತು. ಈ ಪ್ರಕರಣದಲ್ಲಿ ಗಾಯಾಳು ಮೃತ ಹೊಂದಿದ್ದು, ಅವನ ಮೃತ ದೇಹವು ಸಿಟಿ ಕ್ಲಿನಿಕ್ ದಲ್ಲಿದ್ದು, ನಾನು ಕ್ಲಿನಿಕ್ ಗೆ ಬೆಟ್ಟಿ ನೀಡಿ ಸಂಜೆಃ 8.45 ರಿಂದ 9.45 ವರೆಗೆ ಪಂಚರ ಸಮಕ್ಷಮ ನಿಪಿ.13 ರಂತೆ ಶವ ತನಿಖಾ ವರದಿ ತಯಾರಿಸಿದ್ದೇನೆ. ಆ ಕಾಲಕ್ಕೆ ನಿಪಿ.25 ರಂತೆ ಫೋಟೋ ತೆಗೆದಿದ್ದೇನೆ. ನಿಪಿ.13 ರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.13-ಎ ಎಂದು ಗುರುತಿಸಲಾಯಿತು. ನಂತರ ಮೃತ ದೇಹವನ್ನು ಆಸ್ಪತ್ರೆಗೆ ರವಾನಿಸಿ, ಶವ ಪರೀಕ್ಷೆಗೆ ಕಳಿಸಕೊಟ್ಟಿದ್ದೇನೆ.

ಮರಣೋತ್ತರ ಪರೀಕ್ಷೆಯಾದ ನಂತರ ಸಂಬಂಧಿಕರಿಗೆ ಶವವನ್ನು ಹಸ್ತಾಂತರ ಮಾಡಿದ್ದೇನೆ. ನಂತರ ದಿಃ 23.2.2022 ರಂದು ಅಪಘಾತ ದ ಸ್ಥಳಕ್ಕೆ ಬೆಟ್ಟಿ ನೀಡಿ ಚಾಸಾ-10 ರವರು ತೋರಿಸಿದ ಸ್ಥಳದಲ್ಲಿ ಪಂಚರ ಸಮಕ್ಷಮ ನಿಪಿ.3 ರಂತೆ ಪಂಚನಾಮೆ ಕ್ರಮ ಜರುಗಿಸಿ ನಿಪಿ.4 ಹಾಗೂ 5 ರಂತೆ ಪೊಟೋ ತೆಗೆಸಿದ್ದೇನೆ. ನಿಪಿ.3 ರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.3-ಸಿ ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಕಚ್ಚಾ ನಕಾಶೆಯನ್ನು ತಯಾರಿಸಿದ್ದೇನೆ. ಅದೇ ದಿನ ಚಾಸಾ-10 ರಿಂದ 16 ರವರ ಹೇಳಿಕೆ ಪಡೆದಿದ್ದೇನೆ. ಆರೋಪಿ ಹಾಗೂ ವಾಹನದ ಪತ್ತೆಗಾಗಿ ಚಾಸಾ-18 ರವರನ್ನು ನೇಮಕ ಮಾಡಿದ್ದೇನೆ. ಆರ್ ಸಿ ಮಾಲಿಕರಾದ ಚಾಸಾ-26 ಹಾಗೂ 27 ರವರಿಗೆ ದಾಖಲೆ ಹಾಜರಪಡಿಸುವಂತೆ ಐ ಎಂ ವಿ ಕಾಯ್ದೆ 133 ಅಡಿಯಲ್ಲಿ ನೋಟಿಸು ನೀಡಿದ್ದೇನೆ. ಸದರಿ ನೋಟಿಸುಗಳನ್ನು ನಿಪಿ.27 ಹಾಗೂ 28 ಎಂದು ಗುರುತಿಸಲಾಯಿತು. ಚಾಸಾ-20 ರವರು ಆರೋಪಿಯನ್ನು ತಂದು ಹಾಜರಪಡಿಸಿದ್ದು, ಆತನನ್ನು ವಿಚಾರಣೆ ಮಾಡಿ ದಸ್ತಗಿರಿ ನಿಯಮ ಪಾಲಿಸಿ ಸ್ವ-ಇಚ್ಛಾ ಹೇಳಿಕೆ ಪಡೆದು, ಆರೋಪಿ ತೋರಿಸಿ ಸ್ಥಳದಲ್ಲಿ ನಿಪಿ.10 ರಂತೆ ಪಂಚನಾಮೆ ಮಾಡಿ ನಿಪಿ.11 ರಂತೆ ಪೊಟೋ ತೆಗೆದು ಜಾಮೀನು ಬಿಡುಗಡೆ ಮಾಡಿದ್ದೇನೆ. ನಿಪಿ.10 ರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.10-ಬಿ ಎಂದು ಗುರುತಿಸಲಾಯಿತು. ಆರೋಪಿ ಈ ಪ್ರಕರಣದ ಅಪಘಾತವಾದ ಸ್ಥಳ ತೋರಿಸಿದ್ದಾನೆ. ಚಾಸಾ-1, 7, 10 ರಿಂದ 16 ರವರ ಪುನರ ಹೇಳಿಕೆ ಪಡೆದಿದ್ದೇನೆ. ಚಾಸಾ-22 ರವರಿಂದ ಭಾರತ ಸಾಕ್ಷ್ಯ ಅಧಿನಿಯಮ -65 ಬಿ ಅಡಿಯಲ್ಲಿ ಪ್ರಮಾಣ ಪತ್ರ ನಿಪಿ.23 ರಂತೆ ಪಡೆದಿದ್ದೇನೆ. ಅದೇ ರೀತಿ ಚಾಸಾ-21 ರಿಂದ ಭಾರತ ಸಾಕ್ಷ್ಯ ಅಧಿನಿಯಮ-65 ಬಿ ಅಡಿಯಲ್ಲಿ ನಿಪಿ.26 ರಂತೆ ಪ್ರಮಾಣ ಪತ್ರ ಪಡೆದು, ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ಚಾಸಾ-24 ರವರಿಂದ ಅಪಘಾತ ಕ್ಕೊಳಗಾದ ವಾಹನದ ಯಾಂತ್ರಿಕ ಪರೀಕ್ಷಾ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ಸದರಿ ವರದಿಯನ್ನು ನಿಪಿ.30 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿ ನಿಪಿ.30-ಎ ಎಂದು ಗುರುತಿಸಲಾಯಿತು. ನಂತರ ದಿಃ 3.3.2022 ರಂದು ಚಾಸಾ-18 ರವರಿಂದ ಪಿ ಎಂ ವರದಿ ಹಾಗೂ ವಿಶ್ರಾ ವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ಸದರಿ ಪಿ ಎಂ ವರದಿಯನ್ನು ನಿಪಿ.31 ಎಂದು, ನಿಪಿ.12 ನ್ನು ಪಡೆದಿದ್ದೇನೆ. ನಿಪಿ.12 ರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.12-ಬಿ ಎಂದು ಗುರುತಿಸಲಾಯಿತು. ಚಾಸಾ-23 ರವರಿಂದ ಪಿ ಎಂ ವರದಿ ಸ್ವೀಕಾರ ಮಾಡಿ ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ದಿಃ 29.4.2022 ರಂದು ಚಾಸಾ-25 ರವರಿಂದ ಆರ್ ಎಫ್ ಎಸ್ ಎಲ್ ವರದಿ ಪಡೆದುಕೊಂಡು, ಕಡತಕ್ಕೆ ಅಳವಡಿಸಿಕೊಂಡಿದ್ದೆನೆ. ಸದರಿ ಲ್ಯಾಬ ವರದಿಯನ್ನು ನಿಪಿ.32 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿ ನಿಪಿ.32-ಎ ಎಂದು ಗುರುತಿಸಲಾಯಿತು.

ಚಾಸಾ-23 ರವರಿಂದ ಅಂತಿಮ ಅಭಿಪ್ರಾಯ ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದು, ಅದನ್ನು ನಿಪಿ.33 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿಪಿ.33-ಎ ಎಂದು ಗುರುತಿಸಲಾಯಿತು. ಚಾಸಾ-20 ರವರು ಹಾಜರಪಡಿಸಿದ ವಾಹನವನ್ನು ಅಮಾನತ್ತಪಡಿಸಿಕೊಂಡು ನಿಪಿ.8 ರಂತೆ ಪಂಚನಾಮೆ ಮಾಡಿ ನಿಪಿ.9 ರಂತೆ ಫೊಟೋ ತೆಗೆಸಿದ್ದೇನೆ. ನಿಪಿ.8 ರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ.8-ಬಿ ಎಂದು ಗುರುತಿಸಲಾಯಿತು. ದಿಃ 6.3.2022 ರಂದು ಚಾಸಾ-26 ರವರು ಹಾಜರಪಡಿಸಿದ ನಷ್ಟ ಭರ್ತಿ ಪ್ರಮಾಣ ಪತ್ರವನ್ನು ಸ್ವೀಕಾರ ಮಾಡಿ ವಾಹನ ನಂಃ ಕೆಎ-25 ಇಎನ್ -1250 ನೇದ್ದನ್ನು ಬಿಡುಗಡೆ ಮಾಡಿದ್ದೇನೆ. ಸದರಿ ಇಂಡಮಿನಿ ಬಾಂಡನ್ನು ನಿಪಿ.34 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿ ನಿಪಿ.34-ಎ ಎಂದು ಗುರುತಿಸಲಾಯಿತು. ದಿಃ 24.2.2022 ರಂದು ಆರೋಪಿ ರಾಜೇಶನನ್ನು ವೈದ್ಯಕೀಯ ಪರೀಕ್ಷೆಗೆ ಕಳಿಸಿಕೊಟ್ಟಿದ್ದು, ಈ ಕುರಿತು ದಾಖಲೆ ಹಾಜರಪಡಿಸಿದ್ದು ಅದನ್ನು ನಿಪಿ.35 ಎಂದು ಗುರುತಿಸಲಾಯಿತು. ಆರೋಪಿಯ ಸಿ ಡಿ ಆರ್ ನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿದ್ದು, ಸದರಿ ಕೋರಿಕೆ ಪತ್ರವನ್ನು ನಿಪಿ.36 ಎಂದು ಗುರುತಿಸಲಾಯಿತು. ಸಿ ಡಿ ಆರ್ ವರದಿಯನ್ನು ನಿಪಿ.37 ಎಂದು ಗುರುತಿಸಲಾಯಿತು. ಎಸ್ ಡಿ ಆರ್ ನ್ನು ನಿಪಿ.38 ಎಂದು ಗುರುತಿಸಲಾಯಿತು. ದಿಃ 1.3.2022 ರಂದು ಸಹಾಯಕ ಪೋಲಿಸ ಆಯುಕ್ತರವರಿಗೆ ಸಿ ಸಿ ಫೂಟೇಜಗಳನ್ನು ಒದಗಿಸುವಂತೆ ಪತ್ರ ಬರೆದಿದ್ದೇನೆ. ಸದರಿ ಪತ್ರವನ್ನು ನಿಪಿ.39 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿ ನಿಪಿ.39-ಎ ಎಂದು ಗುರುತಿಸಲಾಯಿತು. ದಿಃ 6.3.2022 ರಂದು ಚಾಸಾ-27 ರವರಿಗೆ ಕೆಎ-25 ಜಡ್ /8317 ಗಾಡಿ ಬಿಡುಗಡೆ ಮಾಡಿ ಇಂಡಮಿನಿಟಿ ಬಾಂಡ ಪಡೆದಿದ್ದೇನೆ. ಸದರಿ ಇಂಡಮಿನಿಟಿ ಬಾಂಡನ್ನು ನಿಪಿ.40 ಎಂದು ಗುರುತಿಸಲಾಯಿತು. ಚಾಸಾ-22 ರವರು ಸರ್ವೋದಯ ಸರ್ಕಲ್ ಬಳಿ ಅಳವಡಿಸಿದ ಪಿ ಟಿ ಜಡ್ ಸಿ ಸಿ ಟಿವಿ ಫೂಟೇಜನ್ನು ತಂದು ಹಾಜರಪಡಿಸಿದ್ದು ಅವರಿಂದ ಹೇಳಿಕೆ ಹಾಗೂ ಭಾರತೀಯ ಸಾಕ್ಷ್ಯ ಅಧಿನಿಯಮದಡಿಯಲ್ಲಿ ಪ್ರಮಾಣ ಪತ್ರ ಪಡೆದಿದ್ದೇನೆ. ಸಿ ಡಿ ಯನ್ನು ನಿಪಿ.41 ಎಂದು ಗುರುತಿಸಲಾಯಿತು. ಸದರಿ ಸಿ ಡಿ ಯಲ್ಲಿ ಆರೋಪಿಯ ವಾಹನ ಅಪಘಾತ ಪಡಿಸಿದ ನಂತರ ಸರ್ವೋದಯ ಸರ್ಕಲ್ ಕಡೆಯಿಂದ ನವಲಗುಂದ ಕಡೆಗೆ ಹೋದ ಬಗ್ಗೆ ರಿಕಾರ್ಡ ಆಗಿದೆ. ಹಾಗೂ ಸಿ ಡಿಯಲ್ಲಿ ಆಕ್ಸಫರ್ಡ ಕಾಲೇಜ್ ಕಡೆಗೆ ಹಾಗೂ ಸರ್ವೋದಯ ಸರ್ಕಲದಲ್ಲಿ ಸ್ಥಾಪಿತವಾದ ಎರಡೂ ಕ್ಯಾಮರಾದಲ್ಲಿ ಸೆರೆಹಿಡಿದ ದೃಶ್ಯಾವಳಿಗಳು ಇರುತ್ತವೆ. ಆರೋಪಿ ಅಪಘಾತ ಪಡಿಸಿ ಬೆಂಗಳೂರಿಗೆ ಪರಾರಿಯಾಗಿದ್ದು, ಈ ಕುರಿತು ಆತನು ರೇಲ್ವೆಯಲ್ಲಿ ಪ್ರಯಾಣಿಸಿದ ಕುರಿತಾಗಿ, ಆತನಿಂದ ರೇಲ್ವೆ ಟಿಕೇಟ ಹಾಗೂ ಪ್ಲಾಟಫಾರ್ಮನ್ನು ತೆಗೆದುಕೊಳ್ಳಲಾಗಿದೆ.

ಸದರಿ ಟಿಕೇಟುಗಳನ್ನು ನಿಪಿ.42 ಹಾಗೂ 43 ಎಂದು ಗುರುತಿಸಲಾಯಿತು. ಸಾಕ್ಷಿಯೂ ನ್ಯಾಯಾಲಯದ ಮುಂದಿರುವ ಆರೋಪಿ ನೋಡಿ ಗುರುತಿಸಿದ್ದಾರೆ. ತನಿಖೆ ಮುಗಿದಿದ್ದರಿಂದ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ S I P, ವಕೀಲರಿಂದಃ**

ನಿಪಿ.1 ಹಾಗೂ 27 ರ ಆಧಾರದ ಮೇಲೆ ಅಂಕಿ- ಸಂಂಖ್ಯೆಗೋಸ್ಕರ ಖೊಟ್ಟಿ ಪ್ರಕರಣ ದಾಖಲ್ ಮಾಡಿದ್ದೇವೆ ಅಂದರೆ ಸರಿಯಲ್ಲ. ನಿಪಿ.13 ಹಾಗೂ ಆರೋಪಿಗೂ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ಪಂಚರಿಗೆ ನೋಟಿಸು ಕೊಟ್ಟಿಲ್ಲ. ಪಂಚರು ನಮ್ಮ ಠಾಣೆಯ ಖಾಯಂ ಪಂಚರು ಅಂದರೆ ಸರಿಯಲ್ಲ. ನಾವು ತಯಾರಿಸುವುದು ಕಚ್ಚಾ ನಕಾಶೆ, ಪಿ ಡಬ್ಲ್ಯೂ ಡಿ ತಯಾರಿಸುವುದು ಅಂತಿಮ ನಕಾಶೆ. ನಾನು ಚಾಸಾ-18 ರವರನ್ನು ಆರೋಪಿ ಪತ್ತೆಗಾಗಿ ಲಿಖಿತವಾಗಿ ಜ್ಞಾಪನಾ ನೀಡಿದ್ದೇನೆ. ಆರೋಪಿ ಯಾವುದೇ ಸ್ವ-ಇಚ್ಛೆ ಹೇಳಿಕೆ ನೀಡಿಲ್ಲ ಅಂದರೆ ಸರಿಯಲ್ಲ. ಒತ್ತಾಯ ಮಾಡಿ ಸಹಿ ಪಡೆದಿದ್ದೇನೆ ಅಂದರೆ ಸರಿಯಲ್ಲ. ಆರೋಪಿತನು ಘಟನಾ ಸ್ಥಳ ತೋರಿಸಿಲ್ಲ ಅಂದರೆ ಸರಿಯಲ್ಲ. ಚಾಸಾ-1, 7, 10 ರಿಂದ 16 ರವರ ಪುನರ ಹೇಳಿಕೂ ಹಾಗೂ ಆರೋಪಿಗೂ ಸಂಬಂಧವಿಲ್ಲ ಅಂದರೆ ಸರಿಯಲ್ಲ. ವಾಹನದ ಯಾಂತ್ರಿಕ ಪರೀಕ್ಷಾ ವರದಿಗೂ ಹಾಗೂ ಆರೋಪಿಗೂ ಸಂಬಂಧವಿಲ್ಲ ಅಂದರೆ ಸರಿಯಲ್ಲ. ನಾನು ಪಿ ಎಂ ವರದಿ ಪಡೆದಿಲ್ಲ ಅಂದರೆ ಸರಿಯಲ್ಲ. ನಿಪಿ.32 ಗೂ ಹಾಗೂ ಆರೋಪಿಗೂ ಸಂಬಂಧವಿಲ್ಲ ಅಂದರೆ ಸರಿಯಲ್ಲ. ಚಾಸಾ-23 ರ ಅಭಿಪ್ರಾಯಗೂ ಹಾಗೂ ಆರೋಪಿಗೆ ಸಂಬಂಧವಿಲ್ಲ ಅಂದರೆ ಸರಿಯಲ್ಲ. ಆರೋಪಿಯ ಇರುವಿಕೆ ಸಿ ಡಿ ಆರ್ ಪಡೆದಿದ್ದೇನೆ. ಆತನ ಇರುವಿಕೆ ಬಗ್ಗೆ ಖಚಿತಪಡಿಸಿಕೊಂಡಿದ್ದೇನೆ. ಅಪಘಾತದ ಸ್ಥಳದಲ್ಲಿದ್ದ ಬಗ್ಗೆ ಖಚಿತಪಡಿಸಿಕೊಂಡಿದ್ದೇನೆ. ನಾನು ಬೇರೆ ಮೊಬೈಲ್ ನಂಬರ ಸ್ಥಳದಲ್ಲಿದ್ದ ಬಗ್ಗೆ ಸಿ ಡಿ ಆರ್ ಪಡೆದಿಲ್ಲ. ಗಾಡಿಯಲ್ಲಿರುವ ಇತರೆ ಪ್ರಯಾಣಿಕರ ಹಾಗೂ ಸುತ್ತಮುತ್ತಲಿನ ಜನರ ಸಿ ಡಿ ಆರ್ ಪಡೆದರೆ, ನಿಜವಾದರೆ ಆರೋಪಿಗೆ ಗೊತ್ತಾಗುತ್ತದೆ ಅಂದರೆ, ಗಾಡಿಯಲ್ಲಿ ಒಬ್ಬನೇ ಇದ್ದನೆಂದು ಹೇಳುತ್ತಾರೆ. ಆರೋಪಿ ವಾಹನವನ್ನು ಚಾಲನೆ ಮಾಡಿಲ್ಲ ಅಂದರೆ ಸರಿಯಲ್ಲ. ಅಮಾಯಕನನ್ನು ಪ್ರಕರಣದಲ್ಲಿ ಸೇರಿಸಿದ್ದೇವೆ ಅಂದರೆ ಸರಿಯಲ್ಲ. ಪಿ ಟಿ ಜಡ್ ಅಂದರೆ ಸ್ಕಿಲ್ ಕ್ಯಾಮರಾ. ಸರಕಾರದಿಂದ ಟೆಂಡರ ಆಗಿದ್ದು. ಸಿ ಸಿ ಟಿವಿ ದೃಶ್ಯಾವಳಿಗಳಲ್ಲಿ ವಾಹನ ಕಾಣುತ್ತದೆ ವಿನಃ ಚಾಲಕ ಕಾಣುವುದಿಲ್ಲ ಅಂದರೆ ಸರಿ. ನಾನು ಹೇಳುವಂತಹ ವಾಹನವನ್ನು ಆರೋಪಿ ಚಾಲನೆ ಮಾಡಿಲ್ಲ ಅಂದರೆ ಸರಿಯಲ್ಲ. ಆರೋಪಿ ಅಪಘಾತ ಪಡಿಸಿ ಬೆಂಗಳೂರಿಗೆ ಹೋಗಿದ್ದಾನೆ ಅಂತಾ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿತನು ದೈನಂದಿನ ಕೆಲಸದ ಸಲುವಾಗಿ ಹುಬ್ಬಳ್ಳಿಯಲ್ಲಿದ್ದ, ಬೆಂಗಳೂರಿಗೆ ಹೋಗಿಲ್ಲ ಅಂದರೆ ಸರಿಯಲ್ಲ.

ಆರೋಪಿತನು ರೇಲ್ವೆ ಟಿಕೇಟ್ ಕೊಟ್ಟಿದ್ದಾನೆ. ಹಣ ಕೊಟ್ಟರೆ ರೇಲ್ವೆ ಟಿಕೇಟ್ ಕೊಡುತ್ತಾರೆ, ಪ್ರಯಾಣಿಕರಿಗೆ ಕೊಡುತ್ತಾರೆಂದು ಹೇಳುತ್ತಾರೆ. ರೇಲ್ವೆ ನಿಲ್ದಾಣಕ್ಕೆ ಹೋದವರು ಪ್ಲಾಟಫಾರ್ಮ ಟಿಕೇಟ ತೆಗೆದುಕೊಳ್ಳಬಹುದು. ರೇಲ್ವೆ ಟಿಕೇಟದಲ್ಲಿ ಆರೋಪಿ ಹೆಸರು ಹಾಗೂ ವಿಳಾಸ ಇಲ್ಲ. ನಿಪಿ.42 ಹಾಗೂ 43 ಹಾಗೂ ಆರೋಪಿಗೂ ಸಂಬಂಧವಿಲ್ಲ ಅಂದರೆ ಸರಿಯಲ್ಲ. ಆರೋಪಿತನು ಯಾವುದೇ ತಪ್ಪು ಮಾಡಿಲ್ಲ ಅಂತಾ ತನಿಖಾ ಹಂತದಲ್ಲಿ ಕಂಡುಬಂದಿದ್ದರೂ ಸಹ ಅಂಕಿ - ಸಂಖ್ಯೆಗೋಸ್ಕರ ಕೇಸ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.